# ಕಾಳುಮೆಣಸು ರೈತ ವಿಜ್ಞಾನಿ : ನಾರಾಯಣ ಹೆಗಡೆ

**ರೂಪಾ ಎಸ್. ಪಾಟೀಲ ಮತ್ತು ಅನ್ನಪೂರ್ಣ ನೀರಲಗಿ**

ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಉತ್ತರ ಕನ್ನಡ, ಶಿರಸಿ – 581 401

☎: 9480410770 **ಮಿಂಚಂಚೆ:** patilroopas@uasd.in

**ಭೌಗೋಳಿಕ ಹಾಗೂ ಪ್ರಾದೇಶಿಕ ಭಿನ್ನತೆಯ ಹಿನ್ನಲೆಯಲ್ಲಿ ಕೃಷಿ ಬೆಳೆಗಳಲ್ಲೂ ಬಹಳಷ್ಟು ವೈವಿಧ್ಯ ಕಂಡುಬರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೃಷಿಯಲ್ಲಿ ಪ್ರಯೋಗಶೀಲತ್ವದಿಂದ ಯಶಸ್ಸುಗಳಿಸಿದ ಶ್ರೀ ನಾರಾಯಣ ಹೆಗಡೆ ಕುರಿತು ಯಶೋಗಾಥೆಯಿದು.**

ರೈತ ವಿಜ್ಞಾನಿ ಶ್ರೀ ದತ್ತಾತ್ರೇಯ ನಾರಾಯಣ ಹೆಗಡೆ ಇವರು ಕುಮಟಾ ತಾಲೂಕಿನ ಕತಗಾಲ ಸಮೀಪದ ಅಂತರವಳ್ಳಿಯ ನಡಿಗದ್ದೆಯವರು. ಮೂಲತಃ ಕೃಷಿ ಕುಟುಂಬದಿಂದ ಬಂದ ಇವರು ತಮ್ಮ 12ನೇ ತರಗತಿಯ ವ್ಯಾಸಂಗದ ನಂತರ ದುರ್ಬಲ ಆರ್ಥಿಕ ಪರಿಸ್ಥಿತಿಯಿಂದ ಓದು ಮುಂದುವರೆಸದೆ ಕೃಷಿ ಬದುಕಿಗೆ ಮರಳಿದರು. ಇವರಿಗೆ 3 ಎಕರೆ ಅಡಿಕೆ ತೋಟವಿದ್ದು ಅದರಲ್ಲಿ ಕಾಳು ಮೆಣಸು, ಜಾಯಿಕಾಯಿ, ಬಾಳೆ ಮುಂತಾದ ಸಾಂಪ್ರಾದಾಯಿಕ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಆದರೆ ಕಾಳುಮೆಣಸು ಫಲ ಕೊಡಲು ಪ್ರಾರಂಭಿಸಿದಂತೆ, ಬಳ್ಳಿಗಳು ಕಟ್ಟೆ ರೋಗದ ಬಾಧೆಗೆ ಒಳಗಾಗಿ ಸಾಯಲು ಪ್ರಾರಂಭಿಸಿದವು. ಹೀಗಾಗಿ ಕೈಗೆ ಬಂದ ತುತ್ತು ಬಾಯಿಗೆ ಬಾರದೆ, ಕೃಷಿಯಲ್ಲಿ ನಷ್ಟ ಅನುಭವಿಸಿದರು. ಆದರು ಛಲ ಬಿಡದ ಇವರು ಕಾಳು ಮೆಣಸಿನ ಈ ರೋಗದ ಸಮಸ್ಯೆಗೆ ಪರಿಹಾರ ಹುಡುಕಲು ಸೂಕ್ತ ತಂತ್ರಜ್ಞಾನ ಹುಡುಕುತ್ತಿರುವಾಗ ಇವರಿಗೆ ವರದಾನವಾಗಿ ಪರಿಣಮಿಸಿದ್ದು ಒಂದು ಕರ ಪತ್ರ, ಇದರಲ್ಲಿ ಕಸಿ ಮಾಡಿದ ಕಾಳು ಮೆಣಸಿಗೆ ಕಟ್ಟೆ ಇಲ್ಲ ಎಂಬ ಒಕ್ಕಣೆ ಇವರಲ್ಲಿ ಚೈತನ್ಯ ಮೂಡಿಸಿತು.

ಮೊದಲ ಪ್ರಯತ್ನವಾಗಿ ಸುಮಾರು 1300 ಕಸಿ ಕಟ್ಟಿದ ಬಳ್ಳಿಗಳನ್ನು 2010ರಲ್ಲಿ ತರಿಸಿಕೊಂಡು ತೋಟದಲ್ಲಿ ನೆಟ್ಟು ಪೋಷಿಸಿದರು. ಯಾವುದೇ ರೋಗ ಭಾದೆ ಕಾಣದೇ ಬಳ್ಳಿಗಳು ಉತ್ತಮ ಬೆಳವಣಿಗೆ ತೋರಿಸಿದವು. ಕಸಿ ಕಟ್ಟಿದ್ದರಿಂದ ಇಳುವರಿ ಕೂಡ ಬೇಗ ಪ್ರಾರಂಭವಾಯಿತು. ಮೊದಲನೆ ವರ್ಷ 1 ಕ್ವಿಂ. 25 ಕಿ. ಗ್ರಾಂ ಕಾಳುಗಳನ್ನು ಕೊಯ್ದು, ಮಾರನೇ ವರ್ಷ 4 ಕ್ವಿ 65 ಕಿಲೋ ಫಸಲು ಪಡೆದಿದ್ದಾರೆ. ಹೀಗೆ ವರ್ಷ ವರ್ಷ ಕಾಳು ಮೆಣಸಿನ ಇಳುವರಿ ಹೆಚ್ಚುತ್ತಾ ಇದೆ. ನಂತರದ ದಿನಗಳಲ್ಲಿ ಕಾಳು ಮೆಣಸಿಗೆ ಕಸಿ ಕಟ್ಟುವ ಕಲೆಯನ್ನು ಕರಗತ ಮಾಡಿಕೊಂಡು, ತಮ್ಮ ತೋಟಕ್ಕೆ ಬೇಕಾಗುವಷ್ಟು ಕಸಿ ಬಳ್ಳಿಗಳನ್ನು ತಾವೇ ತಯಾರಿಸಿಕೊಳ್ಳಲಾರಂಭಿಸಿದರು.



**ಅಲ್ಯೂಮಿನಿಯಂ ಪೈಪುಗಳ ಮೇಲೆ ಮೆಣಸಿನ ಬಳ್ಳಿ**

**ಅಳವಡಿಸಿದ ತಂತ್ರಜ್ಞಾನ:** ಕಾಡು ಹಿಪ್ಪಲಿ (*Piper callibrinum*) ಯನ್ನು ತಾಯಿ ಸಸಿಯಾಗಿ ಬಳಸಿ (root stock), ಕಾಳುಮೆಣಸಿನ ಹಬ್ಬು ಕುಡಿಗಳನ್ನು ಸೀಳು ಪದ್ಧತಿಯ ಮೂಲಕ ಕಸಿ ಮಾಡಲಾಗುತ್ತದೆ. 2–3 ತಿಂಗಳುಗಳ ನಂತರ ಈ ಸಸಿಗಳನ್ನು ತೋಟಕ್ಕೆ ನಾಟಿ ಮಾಡಬಹುದು.

ಕಸಿ ಸಸಿಗಳ ರೋಗ ನಿರೋಧಕತೆ ಶಕ್ತಿ ಹಾಗೂ ಇತರೇ ರೈತರುಗಳ ಬೇಡಿಕೆಯನ್ನು ಕಂಡು, ನಾರಾಯಣ ಹೆಗಡೆಯವರು, ಕಸಿ ಕಾಳುಮೆಣಸಿನ ಸಸಿಗಳ ಅಭಿವೃದ್ಧಿ ಹಾಗೂ ಮಾರಾಟವನ್ನು ಪ್ರಾರಂಭಿಸಿ, ಇದನ್ನೊಂದು ಉದ್ಯಮವನ್ನಾಗಿಸಿಕೊಂಡಿದ್ದಾರೆ. ವರ್ಷದಿಂದ ವರ್ಷಕ್ಕೆ ಕಸಿ ಕಟ್ಟಿದ ಕಾಳು ಮೆಣಸಿನ ಬಳ್ಳಿಗಳ ಬೇಡಿಕೆ ಹೆಚ್ಚುತ್ತಿದ್ದು ವರ್ಷಕ್ಕೆ ಸರಾಸರಿ 350000 ಕಸಿ ಬಳ್ಳಿಗಳನ್ನು ಮಾರಾಟ ಮಾಡುತ್ತಿದ್ದಾರೆ.

ಅಲ್ಲದೇ, ತಮ್ಮ ಈ ಉದ್ಯೋಗದಲ್ಲಿ ಸುತ್ತಲಿನ ಗ್ರಾಮಗಳ 15–20 ರೈತ/ರೈತ ಮಹಿಳೆಯರಿಗೆ ಈ ತಂತ್ರಜ್ಞಾನ ಕಲಿಸಿ, ವರ್ಷವಿಡೀ ತಮ್ಮ ನರ್ಸರಿಯಲ್ಲಿ ಇವರಿಗೆ ಉದ್ಯೋಗಾವಕಾಶ ಕಲ್ಪಿಸಿದ್ದಾರೆ.

**ಹೆಗಡೆಯವರ ಪ್ರಯೋಗಶೀಲ ಪ್ರಯತ್ನಗಳು**

• **ಕಾಳು ಮೆಣಸು ಬಳ್ಳಿ ಹಬ್ಬಿಸಲು ಇತರೇ ಆಧಾರಗಳ ಬಳಕೆ:** ಸಾಂಪ್ರದಾಯಿಕವಾಗಿ ಕಾಳುಮೆಣಸನ್ನು ಅಡಿಕೆ ಮರಗಳಿಗೆ ಹಬ್ಬಿಸಲಾಗುತ್ತದೆ, ಆದರೆ ಹೆಗಡೆಯವರು, ಅಡಿಕೆ ಅಲ್ಲದೇ, ಬೇಲಿಯಲ್ಲಿ ಬೆಳೆಸಿದ ಗ್ಲಿರಿಸೀಡಿಯಾ, ಅಕೇಷಿಯಾ ಹಾಗೂ ಬೆಟ್ಟದ ಕಾಡು ಮರಗಳ ಮೇಲೂ ಕಾಳುಮೆಣಸನ್ನೂ ಬೆಳೆಸಿ ಯಶಸ್ವಿಯಾಗಿದ್ದಾರೆ. ಅಲ್ಲದೇ, ಅಲ್ಯೂಮಿನಿಯಂ ಕಂಬ, ಸಿಮೆಂಟ್ ಕಂಬಗಳನ್ನು ಆಧಾರವಾಗಿಸಿಕೊಂಡು ಕಾಳುಮೆಣಸನ್ನು ಬೆಳೆಸಿ ಅಡಿಕೆ ತೋಟ ಇಲ್ಲದೇ ಇದ್ದರೂ, ಕಾಳು ಮೆಣಸು ಕೃಷಿ ಸಾಧ್ಯ ಎಂದು ಇತರರಿಗೆ ತೋರಿಸಿಕೊಟ್ಟಿದ್ದಾರೆ.

• **ಒಂದೇ ತಾಯಿ ಬಳ್ಳಿಗೆ ಹಲವು ಕಸಿಗಳು:** ಒಮ್ಮೆ ಕಸಿ ಕಟ್ಟಿದ ಕಾಳು ಮೆಣಸು ಸಂಪೂರ್ಣವಾಗಿ ಬೆಳೆದ ನಂತರ, ತಾಯಿ ಬಳ್ಳಿಯ ಇತರೆ ಟೊಂಗೆಗಳಿಗೆ ಮತ್ತೆ ಕಸಿ ಮಾಡುವ ಮೂಲಕ ಒಂದಕ್ಕಿಂತ ಹೆಚ್ಚು ಕಸಿ ಬಳ್ಳಿಗಳನ್ನು ಒಂದೇ ತಾಯಿ ಬಳ್ಳಿಯಿಂದ ಬೆಳೆಸುತ್ತಿದ್ದಾರೆ. ಇದರಿಂದ ಇಳುವರಿ ಹೆಚ್ಚಾಗಿದೆ ಎಂದು ಹೆಗಡೆಯವರು ತಿಳಿಸುತ್ತಾರೆ.

• **ಸಾವಯವ ಕೃಷಿ ಅಳವಡಿಕೆ:** ಇವರದು ಸಾವಯುವ ಕೃಷಿ, ತಮ್ಮ ತೋಟಕ್ಕೆ ಬೇಕಾಗುವ ಎರೆಗೊಬ್ಬರ, ಕೊಟ್ಟಿಗೆ ಗೊಬ್ಬರ ತಾವೇ ತಯಾರಿಸಿಕೊಂಡು ಸ್ವಾವಲಂಬಿಗಳಾಗಿದ್ದಾರೆ. ಅಲ್ಲದೇ ಬಯೊಡೈಜೆಸ್ಟರ ಸ್ಲರಿ, ಕುರಿ ಗೊಬ್ಬರ ಗಳನ್ನು ಯಥೇಚ್ಛವಾಗಿ ಬಳಸುತ್ತಾರೆ.

ಇವರ ಯಶಸ್ವಿ ಪ್ರಯತ್ನಗಳನ್ನು ಕರ್ನಾಟಕ ಹಾಗೂ ಗೋವಾ ಭಾಗದ ಕಾಳು ಮೆಣಸು ಬೆಳೆಗಾರರು ಅನುಕರಿಸುತ್ತಿದ್ದಾರೆ. ತೋಟಗಾರಿಕೆ ಇಲಾಖೆ, ಕರ್ನಾಟಕ ಸರಕಾರ ಇವರು ಗುಚ್ಛ ಗ್ರಾಮ ಯೋಜನೆಯಡಿಯಲ್ಲಿ ಸುಮಾರು 1 ಲಕ್ಷ ಕಸಿ ಕಾಳು ಮೆಣಸಿನ ಬಳ್ಳಿಗಳನ್ನು ಖರೀದಿಸಿ ಫಲಾನುಭವಿ ರೈತರಿಗೆ ನೀಡಿದೆ.

ನಾರಾಯಣ ಹೆಗಡೆಯವರ ಪ್ರಯೋಗಶೀಲ ಕೃಷಿಗೆ ಮಾದರಿಯಾಗಿದ್ದು, ಇವರ ತೋಟಕ್ಕೆ ಆಸಕ್ತ ರೈತರು, ಇಲಾಖೆಯ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಅಧಿಕಾರಿಗಳು ಮತ್ತು ಐ.ಸಿ.ಎ.ಆರ್. ಇಲಾಖೆಗಳು ಅಧಿಕಾರಿಗಳು, ನಿರ್ದೇಶಕರುಗಳು ಭೇಟಿ ನೀಡಿದ್ದಾರೆ.

ಇವರ ಯಶಸ್ವಿ ಕೃಷಿಗೆ ಅನೇಕ, ಜಿಲ್ಲಾ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳು ಸನ್ಮಾನಗಳೂ ಲಭಿಸಿವೆ. ಅನೇಕ ಪತ್ರಿಕೆಗಳು ಇವರ ಯಶೋಗಾಥೆಯನ್ನು ಪ್ರಕಟಿಸಿವೆ.

**ಪ್ರಶಸ್ತಿ/ಸನ್ಮಾನಗಳು: 2014–15 ನೇ ಸಾಲಿನ ಐ.ಅ.ಅರ್.ಐ, ನವದೆಹಲಿ ವತಿಯಿಂದ ರಾಷ್ಟ್ರಮಟ್ಟದ ಆವಿಷ್ಕಾರಿ ರೈತ ಪ್ರಶಸ್ತಿ. ಮಾಂಡಲೀಕ ಚಾರಿಟೇಬಲ್ ಹಾಗೂ ವೆಲ್‌ಫೇರ್ ಟ್ರಸ್ಟ ವತಿಯಿಂದ ರೈತ ದಿನಾಚರಣೆ ಅಂಗವಾಗಿ ಸನ್ಮಾನ 2012. ಆವಿಷ್ಕಾರಿ ರೈತ, 2013, ಕೃಷಿ ವಿಶ್ವ ವಿದ್ಯಾಲಯ ಧಾರವಾಡ. ಜನ ಜನನಿ ಗೋ ರಕ್ಷ ಜನಜಾಗೃತಿ ಅಭಿಯಾನ ವತಿಯಿಂದ ಸನ್ಮಾನ ಡಿಸೆಂಬರ್ 2013. ಕನ್ನಡ ರಾಜ್ಯೋತ್ಸವ ಸಮಿತಿ, ಕುಮಟಾ ದಿಂದ ಸನ್ಮಾನ. ತೋಟಗಾರಿಕೆ ಇಲಾಖೆ, ಉತ್ತರ ಕನ್ನಡ ಇವರಿಂದ ಕಾಳು ಮೆಣಸಿನಲ್ಲಿ ಮಾಡಿದ ಮಹತ್ಸಾಧನೆಗೆ ಗೌರವ. ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನ: ನವಚೇತನ, ಕಾಳುಮೆಣಸು ಬೆಳೆಗಾರರ ಸಂಘ, ಸ್ವರ್ಣವಲ್ಲಿ ಪ್ರತಿಷ್ಠಾನ ಇತ್ಯಾದಿ.**

**(ಶ್ರೀ ದತ್ತಾತ್ರೇಯ ನಾರಾಯಣ ಹೆಗಡೆಯವರ ಸಂಪರ್ಕ ಸಂಖ್ಯೆ: 08386 264248)**

****